ವಾರಕ್ಕೊಮ್ಮೆ ರಾತ್ರಿ ಕೊಡುವ ಪರೋಟ ತಪ್ಪಿಸಿಲ್ಲ.

ತರಕನ್ ಹೋಟೆಲ್‌ನಿಂದ ಹೊರಟು ಸ್ವಲ್ಪ ಮುಂದೆ ಬಂದ ಬಳಿಕ ರಸ್ತೆ ಬಿಟ್ಟು ಹೊಳೆ ಬದಿಗೆ ಹೋಗುತ್ತಾನೆ. ಅಲ್ಲಿ ಒಂದಷ್ಟು ಮಣ್ಣನ್ನು ನೀರು ಹಾಕಿ ಕಲಸಿ ಕೈ ಮತ್ತು ಕಾಲುಗಳಿಗೆ ಹಚ್ಚಿಕೊಂಡು ಸ್ವಲ್ಪ ಹೊತ್ತು ಬಿಸಿಲಲ್ಲಿ ಕುಳಿತು ಅದು ಒಣಗಿದ ಬಳಿಕ ಹಾಗೆ ಎದ್ದು ಹೊರಡುವನು. ಮತ್ತೆ ಬಿಳಲೂರಿಗೆ ತಲುಪುವ ಹೊತ್ತಿಗೆ ಸೂರ್ಯ ಪಶ್ಚಿಮದಲ್ಲಿ ಮುಳುಗಿ ಬಾನು ಕೆಂಪೇರಿರುತ್ತದೆ. ಇದರ ನಡುವೆ ರಸ್ತೆಯ ಬಲಬದಿಯ ಸಣ್ಣಪುಟ್ಟ ಅಂಗಡಿಗಳು, ಹೋಟೆಲ್‌ಗಳ ಭೇಟಿಮಾಡಿ ಒಂದು ರೂಪಾಯಿ ಸಂಗ್ರಹ. ಅಲ್ಲಲ್ಲಿ ನಾಲ್ಕೈದು ಕಡೆ ರೂಪಾಯಿ ತೆಗೆದುಕೊಂಡು ಕೊಟ್ಟಿದ್ದನ್ನು ತಿಂದು ಬರುತ್ತಿದ್ದ. ಅಪರೂಪಕ್ಕೆ ಗಂಜಿ ಅಥವಾ ಮೀನು ಸಿಕ್ಕಿದರೆ ಅವತ್ತು ಭಾರಿ ಖುಷಿ ಅವನಿಗೆ. ಹಾಗೆ ಸಿಕ್ಕಾಗಲೆಲ್ಲ 'ಹಾಟ್‌ಮಿಟ್ಲೆ ಡೂ ಮಿಟ್ಲೆ ಹಾಟ್ ಹಾಟ್ ಹಾಟ್" ಎಂದು ರಾಗವಾಗಿ ಹೇಳುತ್ತಾ ಗಹಗಹಿಸಿ ನಗುತ್ತಿದ್ದ.

ಹೀಗಿರುವಾಗ 'ಆತ ಹುಚ್ಚನೂ ಅಲ್ಲ, ಭಿಕ್ಷುಕನೂ ಅಲ್ಲ, ಸಿಐಡಿ' ಎಂಬ ಮಾತು ಇದ್ದಕ್ಕಿದ್ದಂತೆ ಎಲ್ಲ ಕಡೆ ಹರಡತೊಡಗಿತು.

ಸಿಐಡಿ ಅಂದ್ರೆ ಹುಚ್ಚರ ಹಾಗೆ, ಭಿಕ್ಷುಕರ ಹಾಗೆ, ಕೂಲಿ ಕಾರ್ಮಿಕರ ಹಾಗೆ... ಹೀಗೆ ನಾನಾ ವೇಷದಲ್ಲಿ ಬಂದು ಅಪರಾಧಿಗಳನ್ನು ಪತ್ತೆ ಹಚ್ಚುವವರು ಎಂಬುದು ಜನರ ತಿಳಿವಳಿಕೆ. ಸಿಐಡಿ ಅಂದ್ರೆ ಅದು ಪೊಲೀಸ್ ಇಲಾಖೆಯಲ್ಲಿರುವ ಅತ್ಯಂತ ಸಾಹಸಿ ಹುದ್ದೆ. ಅದರಲ್ಲಿ ಕೆಲಸ ಮಾಡುವವರಿಗೆ ಸಿಗುವ ಸಂಬಳ ಮತ್ತು ಗೌರವವೇ ಬೇರೆ. ಅವರೇ ನಿಜವಾದ ಹೀರೊಗಳು ಎಂಬ ಕಲ್ಪನೆ ಇದೆ. ಹಾಗಾಗಿ ಹಾಟ್‌ಮಿಟ್ಲೆಗೆ ಸಿಐಡಿ ಪಟ್ಟ ನೀಡಿದ ಜನರಿಗೆ ಆತನ ಮೇಲಿನ ಗೌರವ ಇನ್ನಷ್ಟು ಹೆಚ್ಚಾಯಿತು. 'ಶಿಸ್ತು ನೋಡಿಯೇ ಹಾಟ್‌ಮಿಟ್ಲೆ ಸಾಮಾನ್ಯನಲ್ಲ ಎಂದು ನಮಗೆ ಮೊದಲೇ ಅನುಮಾನ ಬಂದಿತ್ತು' ಎಂದು ಒಬ್ಬೊಬ್ಬರು ಮಾತನಾಡಿಕೊಳ್ಳತೊಡಗಿದ್ದರು. ಒಂದೇ ರೂಪಾಯಿ, ಒಂದೇ ತಿಂಡಿ, ರಸ್ತೆಯ ಒಂದೇ ಕಡೆಯ ನಡಿಗೆಗಳು ಅವರ ಅನುಮಾನಕ್ಕೆ ಕಾರಣಗಳನ್ನು ಒದಗಿಸುತ್ತಿದ್ದವು.

ಹಾಟ್‌ಮಿಟ್ಲೆ ಮೇಲೆ ಸಿಐಡಿ ಪಟ್ಟ ಅಥವಾ ಅನುಮಾನ ಬರಲು ಒಂದು ಘಟನೆ ಕಾರಣವಾಗಿತ್ತು.

ನೆಲ್ಯಾಡಿಯಿಂದ ಧರ್ಮಸ್ಥಳಕ್ಕೆ ಹೋಗುವ ರಸ್ತೆಯಲ್ಲಿ ಕೊಕ್ಕಡ ಎಂಬ ಜಾಗವಿದೆ. ರಾಷ್ಟ್ರೀಯ ಹೆದ್ದಾರಿಯಿಂದ ಸುಮಾರು ಏಳು ಕಿಲೋಮೀಟರ್ ಒಳಗೆ ಇರುವ ಪ್ರದೇಶವದು. ಅಲ್ಲಿ ಒಬ್ಬನನ್ನು ಕಲ್ಲಿನಿಂದ ಜಜ್ಜಿ ಚೂರಿಯಿಂದ ಇರಿದು ಕೊಲೆ ಮಾಡಲಾಗಿತ್ತು.

ಎಂದೂ ರಾಷ್ಟ್ರೀಯ ಹೆದ್ದಾರಿ ಬಿಡದೆ ಅತ್ತಿತ್ತ ಹೋಗದ ಹಾಟ್‌ಮಿಟ್ಲೆ ಅವತ್ತು ಕೊಕ್ಕಡಕ್ಕೆ ಬಂದಿದ್ದ. ಹೆಣ ಬಿದ್ದ ಸ್ಥಳಕ್ಕೆ ಕುತೂಹಲದಿಂದ ಬಂದಿದ್ದ ನೂರಾರು ಮಂದಿ ಹಾಟ್‌ಮಿಟ್ಲೆ ಬಂದಿರುವುದನ್ನು ನೋಡಿದ್ದರು. ಬರ್ಬರವಾಗಿ ಕೊಲೆಯಾಗಿ ಹೆಣ ಬಿದ್ದು ಗಂಟೆಗಳು ಕಳೆದರೂ ಬಾರದ ಪೊಲೀಸರು ಹಾಟ್‌ಮಿಟ್ಲೆ ಬಂದ ಐದು ನಿಮಿಷದಲ್ಲಿ ಬಂದಿರುವುದು ಕಾಕತಾಳೀಯವೇ ಇರಬಹುದು. ಆದರೆ ಪೊಲೀಸರು ಬಂದಿದ್ದು ಹೌದು. ಬಂದವರೇ ಎಲ್ಲ ವಿಚಾರಿಸಿ ಒಂದು ಗಂಟೆಯ ಒಳಗೆ ಆರೋಪಿಯನ್ನು ಬಂಧಿಸಿದ್ದರು. ಹಾಟ್‌ಮಿಟ್ಲೆ ವಾಪಸ್ ಬಂದು ತನ್ನ ದಾರಿ ಸವೆಸಿ ಮರುದಿನ ಸಂಜೆ ಹೊತ್ತಿಗೆ ಬಿಳಲೂರು ತಲುಪಿದ್ದ. ಹಾಟ್‌ಮಿಟ್ಲೆ ತಲುಪುವ ಮೊದಲು 'ಹಾಟ್‌ಮಿಟ್ಲೆ ಸಿಐಡಿಯಂತೆ' ಎಂಬ ಮಾತು ಕಾಡ್ಗಿಚ್ಚಿನಂತೆ ತಲುಪಿತ್ತು. 'ಕೊಲೆ ಮಾಡಿದ ಜಾಗಕ್ಕೆ ಹಾಟ್‌ಮಿಟ್ಲೆ ಹೋಗುವವರೆಗೆ ಪೊಲೀಸರು ಬರಲಿಲ್ಲವಂತೆ. ಈತ ಹೋದ ಕೂಡಲೇ